# ಮೈನರ್ ರಿಸರ್ಚ್ ಪ್ರಾಜೆಕ್ಟ್‌ನ ಸಂಕ್ಷಿಪ್ತ ರೂಪ

(MRP(H)-1577/11-12/KAMY013/UGC-SWRO)

2014

ಶೀರ್ಷಿಕೆ

## ಗಂಗಾಂಬಿಕೆ ಮತ್ತು ನೀಲಾಂಬಿಕೆ–ಬಸವಣ್ಣನ ಪುಣ್ಯ ಸ್ತ್ರೀಯರು

ಒಂದು ಅಧ್ಯಯನ


ಸಲ್ಲಿಸುವವರು

ಡಾ|| ಎಂ ಸಿ ಸರೋಜಮಣ್ಣಿ
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು,
ಊಟಿರಸ್ತೆ, ಮೈಸೂರು–570025

An Autonomous College of University of Mysore

Re-Accredited by NAAC with ‘A’ Grade
Recognized by DBT and GOI under “Star College Scheme”
Ph: 0821 – 2548236, 2548380. ♦ Fax : 0821-2548238
Email: jssautonomous@gmail.com; ♦ website: www.jsscacs.edu.in


May 2014.

## CONTENTS


| TITLE | | Page Number |
|---|---|---|
| Annexure III | - | |
| Annexure VIII | - | |
| Report of work Done on Annual Basis | - | |
| Final Report of Minor Research Project | - | |

- Introduction - ಮುನ್ನುಡಿ
- Gangambeke and Neelalochane in the visions of poets - ಕವಿಗಳು ಕಂಡ ಗಂಗಾಬಿಕೆ ನೀಲಲೋಚನೆಯರು
- Influence of Basavana - ಬಸವಣ್ಣನ ಪ್ರಭಾವ
- Life Principles in Vachanas. - ವಚನಗಳಲ್ಲಿ ಜೀವನದರ್ಶನj
- Sharana Principles. - ಶರಣಸಿದ್ಧಾಂತ
- Memorisation of other Sharanas - ಶರಣರಸ್ಮರಣೆ
- Intution of Soul - ಆತ್ಮಾವಲೋಕನ
- Spiritual thinking - ಆಧ್ಯಾತ್ಮಿಕ ಚಿಂತನೆ
- Language and Subject - ಭಾಷೆ ಮತ್ತು ವಸ್ತು
- Swara Vachanas of Neelalochane - ನೀಲಲೋಚನೆಯ ಸ್ವರವಚನಗಳು
- Comtemprary of Shiva Sharaneyaru - ಸಮಕಾಲಿನ ಶಿವಶರಣೆಯರು
- Reference. - ಆಧಾರ ಗ್ರಂಥಗಳು

Acceptance Letters for Publication of Articles -

# ಮೈನರ್ ರಿಸರ್ಚ್ ಪ್ರಾಜೆಕ್ಟ್‌ನ ಸಂಕ್ಷಿಪ್ತ ರೂಪ

## ಗಂಗಾಬಿಕೆ ಮತ್ತು ನೀಲಾಂಬಿಕೆ-ಬಸವಣ್ಣನ ಪುಣ್ಯ ಸ್ತ್ರೀಯರು

### ಒಂದು ಅಧ್ಯಯನ

**1. ಕವಿಗಳು ಕಂಡ ಗಂಗಾಂಬಿಕೆ ನೀಲಲೋಚನೆಯರು:-**

ಗಂಗಾಂಬಿಕೆ ಬಸವಣ್ಣನ ಹಿರಿಯ ಪತ್ನಿ, ಬಲದೇವ ಮಂತ್ರಿಯ ಮಗಳು, ಹರಿಹರನ ಬಸವರಾಜದೇವರ ರಗಳೆ, ಭೀಮಕವಿಯ ಬಸವಪುರಾಣ, ಸಿಂಗಿರಾಜನ ಸಿಂಗಿರಾಜಪುರಾಣ, ಸಿದ್ದನಂಜೇಶನ ಗುರುರಾಜ ಚಾರಿತ್ರ್ಯ. ಷಡಕ್ಷರದೇವನ ಬಸವರಾಜವಿಜಯ, ಶಾಂತಲಿಂಗ ದೇಶಿಕನ ಭೈರವೇಶ್ವರ ಕಾವ್ಯ, ಕಥಾಮಣಿ ಸೂತ್ರ ರತ್ನಾಕರ, ಮುಖಬೋಳು ಸಿದ್ಧಲಿಂಗರ ಷಟ್‌ಸ್ಥಲ ತಿಲಕ, ಚೆನ್ನಪ್ಪ ಕವಿಯ ಶರಣ ಲೀಲಾಮೃತ, ವೀರಶೈವಾಮೃತ ಮಹಾಪುರಾಣ ಮುಂತಾದ ಕೃತಿಗಳಲ್ಲಿ ಇವರಿಬ್ಬರನ್ನು ಕುರಿತ ಚಿತ್ರಣವಿದೆ.

**2. ಬಸವಣ್ಣನ ಪ್ರಭಾವ:-**

ಸರ್ವೋದಯಾಸಕ್ತರಾದ ಬಸವಣ್ಣನವರು ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಕ್ರಾಂತಿಕಾರರಾಗಿ ಜಾತೀಯತೆ ಹಾಗು ಲಿಂಗಭೇದದ ಅನುಸರಣೆಯಲ್ಲಿ ನಡೆಯುತ್ತಿದ್ದ ಶೋಷಣೆಯನ್ನು ಪರಿಹರಿಸಿ, ತನ್ಮೂಲಕ ನೊಂದವರ ಮನಕ್ಕೆ ತಂಪನೆರೆದರು. ವರ್ಣಭೇದ ನಿರಾಕರಣೆ, ವರ್ಗಭೇದ ನಿರಾಕರಣೆ, ಲಿಂಗಭೇದ ನಿರಾಕರಣೆಗಳಿಂದ ವಿಚಾರಗಳು ಸ್ಫೋಟಗೊಂಡ ಪರಿಣಾಮ ಬಸವಣ್ಣನ ಸಾಂಸಾರಿಕ ಜೀವನದ ಮೇಲೂ ಆಗಿದೆ. ಅದರ ಫಲವೇ ಗಂಗಾಂಬಿಕೆ ನೀಲಲೋಚನೆಯರ ವಚನ ರಚನೆಗಳು, ಹೆಣ್ಣುಮಾಯೆಯಲ್ಲ, ಆತ್ಮಕ್ಕೆ ಲಿಂಗಭೇದವಿಲ್ಲ, ಹೆಣ್ಣು ಅಸ್ಪೃಶ್ಯಳಲ್ಲ, ಹೆಣ್ಣು ಪ್ರತ್ಯಕ್ಷ ದೇವತೆ, ಪರಸ್ತ್ರೀಪಾರ್ವತಿಯ ಸಮಾನ, ದಾಂಪತ್ಯಧರ್ಮ, ಶ್ರೇಷ್ಠ ಎಂದು ಶರಣ ಕರೆ ನೀಡಿದುದರರು ಪರಿಣಾಮ ಬಸವಣ್ಣನ ಪತ್ನಿಯರ ವಚನಗಳಲ್ಲಿಯೂ ಪ್ರತಿಧ್ವನಿತವಾಗಿದೆ.

**3. ಜೀವನತತ್ವ:-**

ವಚನ ಸಾಹಿತ್ಯದ ಸರ್ವಾದರಣೀಯ ಗುಣಕ್ಕೆ ಕಾರಣ ಅದರಲ್ಲಿರುವ ಜೀವನಪರಕಾಳಜಿಗಳು, ಜನಕ್ಕೆ ಹತ್ತಿರವಾಗುವ ಆತ್ಮೀಯತೆ, ಆಡು ಭಾಷೆ, ಸ್ವಯಂವಿಮರ್ಶೆ, ಅನುಭಾವಿಕ ಸತ್ಯಗಳು, ನೀಲಲೋಚನೆ ಗಂಗಾಂಬಿಕೆಯರ ವಚನಗಳಲ್ಲಿ ಈ ಎಲ್ಲ ಅಂಶಗಳ ದಟ್ಟ ಪ್ರಭಾವವನ್ನು ಗುರುತಿಸುತ್ತೇವೆ.

**4. ಶರಣ ಸಿದ್ಧಾಂತ:–**

ನೀಲಲೋಚನೆ ವೀರಶೈವ ತತ್ವವನ್ನನುಸರಿಸಿ ಲಿಂಗಾಂಗ ಸಂಬಂಧದಿಂದ ಶರೀರವನ್ನು ನಷ್ಟಮಾಡಿ ಮುಕ್ತಿ ಪಡೆಯುವ ಕ್ರಿಯೆಯನ್ನು ತನ್ನ ವಚನಗಳಲ್ಲಿ ನಿರೂಪಿಸಿದ್ದಾರೆ. ಗುರು ಲಿಂಗ, ಜಂಗಮ, ಪಾದೋದಕ, ಪ್ರಸಾದಗಳ ಮಹತ್ವವನ್ನು ತಿಳಿಸಿದ್ದಾರೆ. ಬಸವಣ್ಣನನ್ನು ಈ ಇಬ್ಬರು ವಚನಕಾರ್ತಿಯರು, ಅಂತರಂಗ ಬಹಿರಂಗದಲ್ಲಿ ಬೆಳಗಿ ಪಾವನ ಮಾಡಿದ ಗುರುವೆಂದು ನೆನೆಯುತ್ತಾರೆ. ಲಿಂಗಾಂಗ ಸಾಮರಸ್ಯ, ಅಷ್ಟಾವರಣದ ಮಹತ್ವ ಕಾಯಕ ತತ್ವ, ದಾಸೋಹ ಭಕ್ತಿ, ದಯೆ, ದಾನ, ಧರ್ಮವೆನ್ನೊಳಗೊಂಡ ವಚನಗಳಲ್ಲಿ ಶರಣ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ.

**5. ವಚನಕಾರರ ಸ್ಮರಣೆ:–**

ಬಸವಣ್ಣನೂ ಸೇರಿದಂತೆ ಅನೇಕ ವಚನಕಾರರನ್ನು ಭಕ್ತಿ ಕೃತಜ್ಞತೆ ಗೌರವಾದರಗಳೊಡನೆ ತಮ್ಮ ವಚನಗಳಲ್ಲಿ ನೆನೆದಿದ್ದಾರೆ.

**6. ಆತ್ಮಾವಲೋಕನ:–**

ವೀರಶೈವಭಕ್ತಿ ಆಂದೋಲನದ ಪರಿಣಾಮವಾಗಿ ಅನೇಕ ಶಿವಶರಣೆಯರು ವಿರಕ್ತಿಯ ಹಾದಿ ಹಿಡಿದರು ತಮ್ಮ ಬದುಕಿನ ದಿಕ್ಕು ಗುರಿಗಳನ್ನು ಸ್ವತಂತ್ರ ಮನೋಭಾವದಿಂದ ಆಯ್ದುಕೊಂಡ ವೈಯಕ್ತಿಕ ಜೀವನ ಹಾಗು ಆಧ್ಯಾತ್ಮಿಕ ಅನುಭವಗಳಿಗೆ ನುಡಿಯಲ್ಲಿ ಅಭಿವ್ಯಕ್ತಿ ನೀಡಿದರು. ಗಂಗಾಂಬಿಕೆ ನೀಲಲೋಚನೆಯರ ವಚನಗಳಲ್ಲಿ ಈ ಅಂಶಗಳನ್ನು ಕಾಣುತ್ತೇವೆ.

**7. ಸಾಮಾಜಿಕ ಮೌಲ್ಯಗಳು:–**

ಇಂದಿನ ಸಮಾಜದಲ್ಲಿ ಮೌಲ್ಯಗಳು ಕುಸಿಯುತ್ತಿರುವಾಗ ಮೂಢನಂಬಿಕೆ, ಡಂಭಾಚಾರ, ಸಮಾಜದ ಶ್ರೇಣೀಕರಣ ತತ್ಫಲವಾದ ಶೋಷಣೆ – ಜೀವನದ ಘನತೆ ಕುಗ್ಗಿ ಬದುಕು ಅಸಹನೀಯವೆನಿಸುವ ಕಾಲದಲ್ಲಿ ಶರಣರು ಬದುಕಿಗೆ ನೆಮ್ಮದಿಯನ್ನು ತರುವ, ಅದನ್ನು ಉನ್ನತೀಕರಿಸುವ ಮೌಲ್ಯಗಳನ್ನು ಹುಡುಕಲು ಹೊರಟರು. ಮುಕ್ತಿ ಧರ್ಮದ ಸತ್ವವನ್ನು ಪ್ರೀತಿಸಿದ ಬಸವಣ್ಣ, ಬದುಕನ್ನು ನಿರಾಕರಿಸದ ದರ್ಶನಕ್ಕೆ ಸೋತನು. ಗಂಗಾಂಬಿಕೆ ನೀಲಲೋಚನೆಯರು ಆ ದರ್ಶನಕ್ಕೆ ಆ ಪ್ರೀತಿಗೆ ತಲೆಬಾಗಿ ತಮ್ಮ ವಚನಗಳನ್ನು ರಚಿಸಿ, ಅದನ್ನು ಮನಗಾಣಿಸುವ ಯತ್ನ ನಡೆಸಿದ್ದಾರೆ.

**8. ಭಾಷೆ:–**

ವಚನಕಾರರು ಉದ್ದೇಶ ಪೂರ್ವಕವಾಗಿ ಸಾಹಿತ್ಯ ಸೃಷ್ಟಿಸ ಹೊರಟವರಲ್ಲ. ಕೀರ್ತಿಗಾಗಿ, ಹೊನ್ನಿಗಾಗಿ ಅವರು ಸಾಹಿತ್ಯ ರಚಿಸದಿದ್ದರು, ಅವರು ಬರೆದದ್ದೆಲ್ಲಾ ಸಾಹಿತ್ಯವಾಯಿತು. ಸಾಹಿತ್ಯ ಕ್ಷೇತ್ರಕ್ಕೆ ವಿನೂತನ ಕಾಣಿಕೆಯಾಯ್ತು. ಅನುಭವದ ಒರೆ ಹಚ್ಚಿ ಸರಳವಾಗಿ ಸಂಕ್ಷಿಪ್ತವಾಗಿ ಸರಳಗನ್ನಡದಲ್ಲಿ ಹೇಳಿದರು. ವಚನಗಳು ಈ ಶರಣೆಯರ ಅಂತರಂಗ ಬಹಿರಂಗರ ಆಧ್ಯಾತ್ಮಿಕ ಭಾವಗೀತೆಗಳಾಗಿರುವುದನ್ನು ಕಾಣುತ್ತೇವೆ.

**9. ನೀಲಲೋಚನೆಯ ಸ್ವರವಚನಗಳು:–**

ತಮ್ಮ ಅನುಭಾವದ ವಾಚನ ತೃಪ್ತಿಗಾಗಿ ವಚನಗಳನ್ನು ರಚಿಸಿದ ಶರಣರು ಶ್ರವಣ ತೃಪ್ತಿಗಾಗಿ, ಸ್ವರವಚನಗಳನ್ನು ಬರೆದರು. ಈ ಸಾಹಿತ್ಯ ಲಿಖಿತ ಹಾಗು ಮೌಖಿಕ ಪರಂಪರೆಯಲ್ಲಿ ಮೂಡಿ ಬಂದಿದೆ. ಸಂಗೀತ ಗುಣ ಪ್ರಧಾನವಾದ ಸ್ವರ ವಚನಗಳನ್ನು ನೀಲಲೋಚನೆ ರಚಿಸಿದ್ದು, ತತ್ವಕ್ಕೆ ತತ್ವ ಸಾಹಿತ್ಯಕ್ಕೆ ಸಾಹಿತ್ಯವಾಗಿರುವ ಸ್ವರವಚನ ಸಾಹಿತ್ಯ ಏಕಕಾಲಕ್ಕೆ ಸಮಾಜ ಹಾಗು ಆತ್ಮ ಕಲ್ಯಾಣವನ್ನು ಪ್ರತಿಪಾದಿಸುತ್ತದೆ.

**10. ಸಮಕಾಲೀನ ಶಿವಶರಣೆಯರು:–**

ಗಂಗಾಂಬಿಕೆ ನೀಲಲೋಚನೆಯರು ಸಮಕಾಲೀನ ಶರಣೆಯರನ್ನು ಸಂಕ್ಷಿಪ್ತಾಗಿ ಪರಿಚಯಿಸಲಾಗಿದೆ.

**ಮುಕ್ತಾಯ:–**

ಪ್ರಬಂಧದ ಒಟ್ಟಾರೆಯ ಅಭಿಪ್ರಾಯಗಳನ್ನು ಸಂಗ್ರಹಿಸಲಾಗುತ್ತದೆ. ಇಂದಿನ ಸಮಾಜಕ್ಕೆ ವಚನಸಾಹಿತ್ಯ ಅಗತ್ಯ. ಅದು ರಾಷ್ಟ್ರೀಯ ಅಂತರ ರಾಷ್ಟ್ರೀಯ ಮಟ್ಟದವರೆಗೆ ಅಗತ್ಯ. ಜಗತ್ತಿನ ಎಲ್ಲ ಕ್ಷೇತ್ರಗಳ ಜೀವನ ನಿರ್ವಹಣೆಗೆ ಅಗತ್ಯವಾದ ಅತ್ಯುತ್ತಮ ಮಾರ್ಗದರ್ಶನ ವಚನರಚನೆಗಳಲ್ಲಿದೆ ಆದ್ದರಿಂದ ಅಂದು ಇಂದು ಎಂದೆಂದೂ ವಚನಗಳು ಪ್ರಸ್ತುತವೆನಿಸುತ್ತದೆ.